# ಕಾಡುವ ಕಾಡು ಹೂಗಳು

ಚಿತ್ರ –ಬರಹ:
**ಪುರುಷೋತ್ತಮ ಎಂ.ಆರ್**



ಸುಗ್ಗಿ ಬಂದರೆ ಮಾವಿಗಷ್ಟೇ ಸುಗ್ಗಿಯೇ?
ಬೇವು ಸಹ ಚಿಗುರುವುದು ತನ್ನಷ್ಟಕ್ಕೆ
ಮಳೆಕಾಲವು ನವಿಲಿಗಷ್ಟೆ ಹಬ್ಬವೇ?
ಕಪ್ಪೆ ಸಹ ನಲಿಯುವುದು ತನ್ನಷ್ಟಕ್ಕೆ.

–ಕವಿ ಪರಮೇಶ್ವರ ಭಟ್ಟರ ಕವನದ ಸಾಲುಗಳು ಎಷ್ಟೊಂದು ಅರ್ಥಗರ್ಭಿತವಾಗಿದೆ. ಪ್ರಕೃತಿ ಶಿಶಿರ ಮಾಸದಲ್ಲಿ ಮುದುಡಿ ಕುಳಿತು ವಸಂತ ಮಾಸದಲ್ಲಿ ಚಿಗುರಿ ಹೂವರಳಲು ಪ್ರಾರಂಭಿಸುತ್ತವೆ.

ಹೂದೋಟ ರೈತರ ಜಮೀನಿನಲ್ಲಿ ಮಾನವರ ಪಾಲನೆ ಪೋಷಣೆಯಲ್ಲಿ ಗಿಡ ಬೆಳೆದು ಹೂ ಅರಳಿ ನಳನಳಿಸುವುದರಲ್ಲಿ ಹೊಸತೇನೂ ಇಲ್ಲ. ಆದರೆ ರಸ್ತೆ ಬದಿ, ಕಾಡು, ಇನ್ನಿತರ ಜಾಗಗಳಲ್ಲಿ ಸಂದಿಗೊಂದಿಗಳಲ್ಲಿ ಜಾಗ ಮಾಡಿಕೊಂಡು ಯಾವುದೇ ಪಾಲನೆ ಪೋಷಣೆಗಳಿಲ್ಲದೆ ಬೆಳೆದು ನಳನಳಿಸುವ ಈ ಹೂಗಳು ಬಿರು ಬಿಸಿಲಿನಲ್ಲಿಯೂ ಮನ ಮುದಗೊಳಿಸುತ್ತವೆ. ಮನುಷ್ಯರ ಹಂಗಿಲ್ಲದೆ ಪ್ರಕೃತಿ ತಾನೇ ಸ್ವತಃ ಮುಂದೆ ನಿಂತು ಪೋಷಿಸಿದ ಹೂವುಗಳಿವು.

ಪ್ರಕೃತಿಯು ಪ್ರಾಣಿ, ಪಕ್ಷಿ ಸಸ್ಯ ಸಂಕುಲಗಳಿಗೆ ತಮ್ಮದೇ ಜೀವನ ಕ್ರಮವನ್ನು ನೀಡಿದೆ. ಎಲ್ಲೆಂದರಲ್ಲಿ ಮನಸೆಳೆವ ಬಣ್ಣಗಳಿಂದ ರಂಜಿಸುವ ಈ ಕಾಡುಹೂವುಗಳು ಅದನ್ನೇ ಹೇಳುತ್ತಿರುವಂತಿದೆ. ಮನುಷ್ಯನೂ ಇದನ್ನರಿತು ಬಾಳಿದರೆ ಭೂಮಿಯೇ ಸ್ವರ್ಗವಾಗಬಹುದಲ್ಲವೆ?



